# ಜಾಗತೀಕರಣವೆಂಬ ಜಂಝಾವಾತ

ಎಸ್.ಆರ್. ರಾಮಸ್ವಾಮಿ

(ಹಿಂದಿನ ಸಂಚಿಕೆಯಿಂದ)

### ಪ್ರತಿಬಂಧಗಳು

ಅಭಿವೃದ್ಧಿಶೀಲ ದೇಶಗಳು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸ್ಪರ್ಧಿಸಲು ಶಕ್ತವಾಗಿರುವುದು ಹಲಕೆಲವು ಸಾಂಪ್ರದಾಯಿಕ ಕ್ಷೇತ್ರಗಳಲ್ಲಿ ಮಾತ್ರ: ಜವಳಿ ಉತ್ಪನ್ನಗಳು, ಕೆಲವು ಕೃಷಿ–ತೋಟಗಾರಿಕೆ ಉತ್ಪನ್ನಗಳು, ಸಮುದ್ರೋತ್ಪನ್ನಗಳು ಮೊದಲಾದವು. ಇದು ಸಾಧ್ಯವಾಗಿರುವುದು ಅಭಿವೃದ್ಧಿಶೀಲ ದೇಶಗಳಲ್ಲಿ ಕಾರ್ಮಿಕಶಕ್ತಿ ಅಧಿಕಪ್ರಮಾಣದಲ್ಲಿ ಲಭ್ಯವಿರುವ ಮತ್ತು ಕಾರ್ಮಿಕರ ವೇತನಗಳು ಬಲಿಷ್ಠ ದೇಶಗಳಲ್ಲಿರುವುದಕ್ಕಿಂತ ಬಹಳ ಕಡಮೆ ಇರುವ ಕಾರಣದಿಂದ ಮಾತ್ರವೇ.

ಆದರೆ ಇಂಥ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳುವಲ್ಲಿ ಬಲಿಷ್ಠ ದೇಶಗಳು ಬಗೆಬಗೆಯ ಪ್ರತಿಬಂಧಗಳನ್ನು ಹೇರುತ್ತಿವೆ. ತುಂಬಾ ಹೆಚ್ಚಿನ ಆಮದು ಸುಂಕವನ್ನು ವಿಧಿಸುತ್ತಿವೆ – ಕೆಲವೊಮ್ಮೆ ಶೇ. ೫೦೦ ರಷ್ಟು. ಅಲ್ಲದೆ ಪ್ರತ್ಯೇಕ ಉತ್ಪನ್ನಗಳ ಆಮದಿನ ಪ್ರಮಾಣಕ್ಕೆ ಗರಿಷ್ಠ ಮಿತಿಯನ್ನು ವಿಧಿಸುತ್ತಿವೆ.

ಅಭಿವೃದ್ಧಿಶೀಲ ದೇಶಗಳ ಈ ಅಸಹಾಯಕತೆಯ ಪೂರ್ಣ ಲಾಭ ಪಡೆದು ಬಹುರಾಷ್ಟ್ರೀಯ ಕಂಪೆನಿಗಳು ಈ ದೇಶಗಳ ಕಚ್ಚಾ ಸಂಪನ್ಮೂಲಗಳನ್ನು ಅಗ್ಗದ ದರದಲ್ಲಿ ಕೊಂಡು ತಮ್ಮ ವಹಿವಾಟನ್ನು ಬೆಳೆಸಿಕೊಳ್ಳುತ್ತಿವೆ. ಬಹುರಾಷ್ಟ್ರೀಯ ಕಂಪೆನಿಗಳಿಗೆ ಯಾರ ಮುಲಾಜೂ ಇರುವುದಿಲ್ಲ. ಅವು ಕೇವಲ ಲಾಭದ ದೃಷ್ಟಿಯುಳ್ಳವು. ಅವುಗಳೊಡನೆ ಮಾರುಕಟ್ಟೆಯಲ್ಲಿ ಸ್ಪರ್ಧಿಸುವುದು ಸಣ್ಣ ಅಥವಾ ಬಡ ದೇಶಗಳಿಗಾಗಲಿ, ಸಣ್ಣ ಗಾತ್ರದ ಸಂಸ್ಥೆಗಳಿಗಾಗಲಿ ಸಾಧ್ಯವೇ ಇಲ್ಲ. ಇಡೀ ಮಾರುಕಟ್ಟೆಯನ್ನೇ ಈ ಬಹುರಾಷ್ಟ್ರೀಯ ಸಂಸ್ಥೆಗಳು ಜಾಹಿರಾತುಗಳಿಂದಲೂ ವಿಶಿಷ್ಟ ಮಾರಾಟ ತಂತ್ರಗಳಿಂದಲೂ ಏರುಪೇರು ಮಾಡುತ್ತವೆ. ಇವುಗಳ ಆಘಾತದಿಂದ ಭಾರತದಂಥ ಅಭಿವೃದ್ಧಿಶೀಲ ದೇಶಗಳೊಳಗಿನ ಸಣ್ಣ ಉದ್ಯಮಗಳೂ ಗೃಹ ಕೈಗಾರಿಕೆಗಳೂ ಅವಸಾನವಾಗುತ್ತಿವೆ; ಈಗೀಗ ದೊಡ್ಡ ಉದ್ಯಮಗಳೂ ಈ ಆಘಾತದಿಂದ ಕುಸಿಯುತ್ತಿವೆ.

### ಆದ್ಯತೆ ಯಾವುದಕ್ಕೆ ಇರಬೇಕು?

ಯಾವ ವಿದೇಶಿ ಪ್ರಭಾವಗಳ ವ್ಯಾಪ್ತಿಗೆ ಎಷ್ಟು ಅವಕಾಶ ಕೊಡಬೇಕೆಂಬುದನ್ನು ಭಾರತ ಪ್ರಜ್ಞಾಪೂರ್ವಕವಾಗಿ ನಿರ್ಣಯಿಸಬೇಕು. ಈ ನಿರ್ಣಯಾಧಿಕಾರವನ್ನು ತನ್ನಲ್ಲಿ ಉಳಿಸಿಕೊಳ್ಳಬೇಕು. ಸ್ಥಳೀಯ ಲಘು ಉದ್ಯಮಗಳನ್ನೂ, ಕುಶಲಕರ್ಮಿಗಳನ್ನೂ ಜಾಗತೀಕರಣದ ಹೆಸರಿನಲ್ಲಿ ನಿರ್ನಾಮ ಮಾಡುವುದು ಅಪೇಕ್ಷಣೀಯವಲ್ಲ. ಮುಖ್ಯ ಸಂಗತಿಯೆಂದರೆ ಭಾರತದ ಸನ್ನಿವೇಶದಲ್ಲಿ ಹೆಚ್ಚಿನ ಉದ್ಯೋಗ ನಿರ್ಮಾಣಕ್ಕೆ ಅವಕಾಶ ನೀಡುವಂಥ ಉದ್ಯಮಗಳು ಅಪೇಕ್ಷಣೀಯವೇ ಹೊರತು ನಿರುದ್ಯೋಗವನ್ನು ಹೆಚ್ಚಿಸುವ ಉದ್ಯಮಗಳಲ್ಲ. ಹಸಿವು–ಬಡತನ–ನಿರುದ್ಯೋಗಗಳ ನಿವಾರಣೆಗೆ ಆದ್ಯತೆ ನೀಡುವ ಧೋರಣೆಯನ್ನು ಸರ್ಕಾರ ಕೈಬಿಡಬಾರದು; ಅದನ್ನು ಮುಂದುವರಿಸಬೇಕು ಮತ್ತು ಅದನ್ನು ಸರಿಯಾಗಿ ಅನುಷ್ಠಾನಕ್ಕೆ ತರುವಲ್ಲಿ, ಕಾರ್ಯಾನ್ವಯದಲ್ಲಿ ಹೆಚ್ಚಿನ ದಕ್ಷತೆ ತರಬೇಕು. ಇದನ್ನು ಅಲಕ್ಷಿಸುವ ಆರ್ಥಿಕ ವಿನ್ಯಾಸಗಳು ಎಷ್ಟೇ ಆಡಂಬರದಿಂದ ಕೂಡಿದ್ದರೂ ದೇಶದ ಅಧಿಕ ಸಂಖ್ಯೆಯ ಜನರಮಟ್ಟಿಗೆ ಅವು ಅಸಂಗತವೇ ಆಗುತ್ತವೆ. ಮೆಕ್ಡೊನಾಲ್ಡ್‌ನಂತಹ ದಿಢೀರ್ ಆಹಾರಜಾಲಗಳು ದೇಶದ ತುಂಬೆಲ್ಲ ಹರಡುವುದರಿಂದ ಒಂದಷ್ಟು ಆರ್ಥಿಕ ವಹಿವಾಟಿನ ವೃದ್ಧಿ ಆದೀತು. ಆದರೆ ದೇಶದ ನಿಜವಾದ ಸಮಸ್ಯೆಗಳಿಗೆ ಅದು ಎಷ್ಟು ಮಾತ್ರವೂ ಪರಿಹಾರವಾಗದು.

ಬಂಡವಾಳ–ಆಧಾರಿತ ಜಾಗತೀಕರಣದ ಫಲಾನುಭವಿಗಳು ಜನಸಂಖ್ಯೆಯ ಶೇ.೧೦ಕ್ಕೂ ಕಡಮೆ ಇರುವ ಶ್ರೀಮಂತ ಹಾಗೂ ಮೇಲುಮಧ್ಯಮ ವರ್ಗಗಳವರು ಮಾತ್ರ ಎಂಬ ಮೂಲ ತಥ್ಯವನ್ನು ಗಮನಿಸಬೇಕು. ಯಾವ ಆರ್ಥಿಕ ಪುನರ್ವಿನ್ಯಾಸವನ್ನು ಅಮೆರಿಕ ಎಲ್ಲರ ಮೇಲೂ ಹೇರುತ್ತಿದೆಯೋ ಅದು ಅರ್ಥಪೂರ್ಣವಾಗಿದ್ದರೆ ಅಮೆರಿಕದಲ್ಲಿಯೇ ಬಡವರ ಪ್ರಮಾಣ ಶೇ.೧೩ ರಷ್ಟು ಇರುವುದು ಏಕೆ?

ಪ್ರತಿಯೊಂದು ದೇಶವೂ ತನ್ನ ಸನ್ನಿವೇಶಕ್ಕೆ ಹೊಂದುವ ಆರ್ಥಿಕತೆಯನ್ನು ರೂಪಿಸಿಕೊಳ್ಳಲು ಅವಕಾಶ ಇರುವುದೇ ನಿಜವಾದ ಅರ್ಥಪೂರ್ಣ ಜಾಗತೀಕರಣದ ಲಕ್ಷಣ.

### ಅಂಧಾನುಕರಣೆ ಬೇಡ

ಶ್ರೀಮಂತ ದೇಶಗಳವರ ಮಾರ್ಗದರ್ಶನವನ್ನು (ಹಲವೊಮ್ಮೆ ಅದು ಸದುದ್ದೇಶದ್ದೂ ಆಗಿರದೊಲ್ಲದೇಕೆ?) ವಿಚಾರಶೂನ್ಯವಾಗಿ ಸ್ವೀಕರಿಸಿದುದಕ್ಕೆ ಬಡದೇಶಗಳು ಬಹಳ ಹೆಚ್ಚಿನ ಬೆಲೆ ತೆರಬೇಕಾಗಿ ಬಂದಿದೆ.

ಇಂಥ ಅಂಧಾನುಕರಣೆ ವಾಸ್ತವವಾಗಿ ಇತಿಹಾಸದ

---

**ಹಿಂದಿನ ಸಂಚಿಕೆಯಲ್ಲಿ**

ಜಾಗತೀಕರಣ ಮೊದಲಾದ ನುಡಿಗಟ್ಟುಗಳು ಭ್ರಾಮಕಲೋಕಕ್ಕೆ ಸೇರಿದವು. ಇದೀಗ 'ಆರ್ಥಿಕತೆ' ಎಂದು ಪರಿಗಣಿತವಾಗುತ್ತಿರುವ ಚಟುವಟಿಕೆ ಶೇ.೧೦–೧೫ ರಷ್ಟು ಜನತೆಗೆ ಮಾತ್ರ ಸೀಮಿತವಾಗಿದೆ. ಭೌಗೋಳಿಕವಾಗಿಯೂ ಇದು ಅತ್ಯಂತ ಕಡಮೆ ಪ್ರಮಾಣದಲ್ಲಿ ಪ್ರಸಾರಗೊಂಡಿದೆ. ಜಾಗತೀಕರಣವೆಂಬುದು ಜಗತ್ತಿನ ಅಧಿಕಭಾಗದ ರಾಷ್ಟ್ರಗಳನ್ನು ಪರಾವಲಂಬಿಗಳಾಗಿಯೇ ಇರಿಸಿ ಮುಂದುವರಿಸುವ ಬಲಿಷ್ಠ ರಾಷ್ಟ್ರಗಳ ತಂತ್ರ. ಈ ಜಾಗತಿಕ ಪ್ರವೃತ್ತಿ ಅತಿ ದೊಡ್ಡ ಉದ್ಯಮಗಳಿಗೆ ವರದಾನವಾಯಿತು. ಆದರೆ, ಬಡ ದೇಶಗಳ ಮಾತಿರಲಿ; ಶ್ರೀಮಂತ ದೇಶಗಳಲ್ಲೆ ಇರುವ ಬಡ ವರ್ಗಗಳಿಗೂ ಈ ಪ್ರಕ್ರಿಯೆಯಿಂದ ಅತ್ಯಲ್ಪ ಪ್ರಯೋಜನವೂ ಆಗಲಿಲ್ಲ.

( *ಇನ್ನು ಮುಂದೆ ಓದಿ* )

ವಿಶ್ವ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ (HDI) ಮಾನವ ಕಲ್ಯಾಣವನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಅದರಲ್ಲಿ ಮೂರು ಆಯಾಮಗಳಿವೆ. ೧.ದೀರ್ಘ ಮತ್ತು ಆರೋಗ್ಯಕರ ಬಾಳುವೆ ೨. ಶಿಕ್ಷಣ ಮಟ್ಟ ೩. ಸರಾಸರಿ ವ್ಯಕ್ತಿಗತ ವರಮಾನ (ಜಿ.ಡಿ.ಪಿ.). ಈ ಸೂಚ್ಯಂಕದಲ್ಲಿ ಭಾರತ ಇಡೀ ವಿಶ್ವದಲ್ಲಿಯೇ ೧೨೮ ನೆಯ ಸ್ಥಾನದಲ್ಲಿ ಇದೆ ! ಆದರೆ ವಿಪರ್ಯಾಸವೋ ಎಂಬಂತೆ, ಅದು ಶೇ. ೯ ರಷ್ಟು ಅಭಿವೃದ್ಧಿಯನ್ನು ಇತ್ತೀಚಿನ ವರ್ಷಗಳಲ್ಲಿ ಸಾಧಿಸುತ್ತಿದೆ. ಅನೇಕ ಆಫ್ರಿಕನ್ ಬಡದೇಶಗಳು, ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ನಮಗಿಂತ ಮುಂದೆ ಇವೆ. ಆದರೆ ಅವು ಯಾವುವೂ ಇಷ್ಟೊಂದು ಆರ್ಥಿಕ ಪ್ರಗತಿಯನ್ನು ಹೊಂದಿಲ್ಲ!! ಅಷ್ಟು ಮಾತ್ರ ಅಲ್ಲ, ನಮ್ಮದು ಜಗತ್ತಿನ ಅತ್ಯಂತ ದೊಡ್ಡ ಅರ್ಥವ್ಯವಸ್ಥೆಗಳಲ್ಲಿ ಒಂದು. ಟೈಮ್ಸ್ ಆಫ್ ಇಂಡಿಯಾ ಪ್ರಕಾರ, ನಾವು ಜಗತ್ತಿನ ಬಿಲಿಯನುರುಗಳಲ್ಲಿ ೧೦ ಜನರನ್ನು ಹೊಂದಿದ್ದೇವೆ. ಅವರ ಆಸ್ತಿಯ ಒಟ್ಟು ಮೌಲ್ಯ ಕೇವಲ ಮೂರು ತಿಂಗಳಲ್ಲಿ ಶೇ. ೨೭ ರಷ್ಟು, ಅಂದರೆ, ೬೫.೩ ಮಿಲಿಯನ್ ಡಾಲರ್‌ನಷ್ಟು ಜಾಸ್ತಿಯಾಗಿದೆ! ಅಂದರೆ ಗಂಟೆಗೆ ೧೧೯ ಕೋಟಿ ರೂಪಾಯಿಗಳು ಮತ್ತು ನಿಮಿಷಕ್ಕೆ ೪೦ ಲಕ್ಷ ರೂಪಾಯಿಗಳಷ್ಟಾಯಿತು. ಆದರೆ, ಈ ದೇಶದ ರೈತ ಕೂಲಿಕಾರ್ಮಿಕರ ದಿನಗೂಲಿ ಹಲವು ವರ್ಷಗಳಿಂದ ೪೦ ರೂಪಾಯಿಗಳಷ್ಟೂ ಅಧಿಕವಾಗಿಲ್ಲ. ಅದಲ್ಲದೆ ಭಾರತೀಯ ವಾಣಿಜ್ಯ ರಾಜಧಾನಿಯಾದ ಮುಂಬಯಿ ಯಾವ ರಾಜ್ಯದ ರಾಜಧಾನಿಯಾಗಿದೆಯೋ, ಅಲ್ಲಿ ೧೯೯೫ ರಿಂದ ೩೨,೦೦೦ ಬಡ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. (ಪಿ.ಸಾಯಿನಾಥ್, 'ದಿ ಹಿಂದೂ', ೨೪.೧೨. ೨೦೦೭)

ಅನುಭವಕ್ಕೆ ಕೂಡ ವಿರುದ್ಧವಾದದ್ದೇ. ಉದಾಹರಣೆಗೆ ಮೊದಲು ಇಂಗ್ಲೆಂಡಿನಲ್ಲಿ 'ಔದ್ಯಮಿಕ ಕ್ರಾಂತಿ' ಆಯಿತು. ಆದರೆ ಜರ್ಮನಿಯಲ್ಲಿಯೂ, ರಷ್ಯದಲ್ಲಿಯೂ ಆದ ಪ್ರಗತಿ ಇಂಗ್ಲೆಂಡಿನ ಅನುಕರಣೆಯಾಗದೆ ಬೇರೆ ರೀತಿಯದೇ ಆಗಿತ್ತು. ಹೀಗೆ ಒಂದೊಂದು ದೇಶವೂ ತನ್ನದೇ ದಾರಿಯನ್ನು ಕಂಡುಕೊಳ್ಳಬೇಕು ಎಂಬುದೇ ಇತಿಹಾಸಸಿದ್ಧ ತಥ್ಯ.

ಯೋಜನಾತಜ್ಞರ ಚಿಂತನೆಯಲ್ಲಿ ಉದಾಸೀನತೆಗೆ ಗುರಿಯಾದ, ಆದರೆ ಅತ್ಯಂತ ಮಹತ್ತ್ವದ ಸಂಗತಿಗಳು ಮೂರು:

**೧)ಇತಿಹಾಸದ ಸಾಂದರ್ಭಿಕತೆ:** ಇಂದಿನ ಸ್ಥಿತಿಗೆ ಕಾರಣವಾದ ಸಂದರ್ಭಗಳು ಏನೇನೆಂದು ಅರಿತುಕೊಂಡಲ್ಲಿ ಮಾತ್ರ ಇಂದು ನಾವು ಕೈಗೊಳ್ಳಬೇಕಾದ ಪ್ರಯಾಸಗಳ ಪರಿಮಿತಿಗಳನ್ನು ಗುರುತಿಸಿಕೊಳ್ಳುವುದು ಸಾಧ್ಯವಾಗುತ್ತದೆ.

**೨)ಜಾಗತಿಕ ಆಯಾಮ:** ಇಂದಿನ ಅಂತರರಾಷ್ಟ್ರೀಯ ವ್ಯವಸ್ಥೆಗಳ, ಹಿತಾಸಕ್ತಿ ಕೂಟಗಳ ಜಟಿಲತೆಗಳನ್ನು ಪರಿಗಣಿಸದೆ ನಡೆಸುವ ದೇಶೀಯ ಅಭ್ಯುದಯ ಚಿಂತನೆ ಸಮಗ್ರವಾಗಲಾರದು; ಏಕೆಂದರೆ ನಾವು ಹೊಸದಾಗಿ ಯಾವುದೇ ಪ್ರಯಾಸವನ್ನು ಕೈಗೊಳ್ಳಬೇಕಾದರೂ ಮೊದಲು ಈಗಿನ ಸಿಕ್ಕುಗಳಿಂದ ಬಿಡಿಸಿಕೊಳ್ಳುವುದು ಅಗತ್ಯ.

**೩)ತಲಸ್ಪರ್ಶಿಯೂ ಸೂಕ್ಷ್ಮಾಂಶಗ್ರಾಹಿಯೂ ಆದ ಚಿಂತನೆ:** ಉದಾಹರಣೆಗೆ, ಉದ್ಯಮವಲಯ, ಮಾರುಕಟ್ಟೆ ಮುಂತಾದವನ್ನು ಕುರಿತು ಯೋಜನೆಗಳನ್ನು ರೂಪಿಸಹೊರಟ ತಜ್ಞರು ಸಾಮಾಜಿಕ ರೀತಿರಿವಾಜುಗಳು, ಕುಟುಂಬ ವ್ಯವಸ್ಥೆ, ವ್ಯಕ್ತಿಸಂಸ್ಕಾರ ಮೊದಲಾದ ಅಂಶಗಳ ಕಡೆಗೆ ಲಕ್ಷ್ಯ ಹರಿಸಲಿಲ್ಲ.

ನಮ್ಮ ಜೀವನಕ್ಕೆ ಒಂದು ಸಹಜವಾದ ಲಯ ಇರುತ್ತದೆ. ನಮ್ಮ ಹೊರಗಿನ ಚಟುವಟಿಕೆಗಳು ಆ ಸಹಜ ಲಯಕ್ಕೆ ಹೊಂದುವಂತೆ ಇರಬೇಕಾಗುತ್ತದೆ. ಇದು ಒಂದು ನಿಸರ್ಗ ನಿಯಮ. ನಮ್ಮ ಸಹಜ ಜೀವನ ಲಯವನ್ನು ಗಣನೆಗೆ ತೆಗೆದುಕೊಳ್ಳದೆ ಹೊರಗಿನ ಚಟುವಟಿಕೆಗಳನ್ನೂ ವೇಗವನ್ನೂ ಹೆಚ್ಚಿಸುತ್ತ ಹೋದರೆ ಧಾವಂತವಾಗುತ್ತದೆ, ಅಶಾಂತಿ ಉಂಟಾಗುತ್ತದೆ. ಬಾಹ್ಯಜೀವನದ ವೇಗವು ಮಿತಿಮೀರಿದಾಗ ಈ ಸಾಮರಸ್ಯಕ್ಕೆ ಬಾಧೆಯೊದಗುತ್ತದೆ, ವಿರಸ ಉಂಟಾಗುತ್ತದೆ. ನೆಮ್ಮದಿ ಮತ್ತು ನಿಧಾನಗತಿಗಳು ಕೂಡ ಜೀವನದ ಅನಿವಾರ್ಯ ಅಂಗಗಳೇ.

## ಸಾಂಸ್ಕೃತಿಕ ಆಕ್ರಮಣ

ಈಗ ನಡೆದಿರುವ ಆರ್ಥಿಕ ಆಕ್ರಮಣಕ್ಕಿಂತ ಬಹುಪಾಲು ಹೆಚ್ಚು ಹಾನಿಕರವಾದದ್ದು ಸಾಂಸ್ಕೃತಿಕ ಆಕ್ರಮಣ. ನಮ್ಮ ವಿಶಿಷ್ಟ ಸಾಮಾಜಿಕ ಹಿನ್ನೆಲೆಯನ್ನೂ, ನಮ್ಮ ಪ್ರಮುಖ ಶಕ್ತಿ ಸಾಮರ್ಥ್ಯ ಸಂಪನ್ಮೂಲಗಳನ್ನೂ ನಮ್ಮ ದೇಶದ ಆದ್ಯತೆಗಳನ್ನೂ ಉದಾಸೀನ ಮಾಡಿ ಯಾರ್ಯಾರೋ ನೀಡಿದ ಬೋಧೆಗಳನ್ನು ಕೇಳುತ್ತ ಬಂದಿರುವುದಕ್ಕೆ ನಾವೀಗ ಅಪಾರ ಬೆಲೆ ತೆರುತ್ತಿದ್ದೇವೆ.

ಅಮೆರಿಕದ ಹಾಗೂ ಬಹುರಾಷ್ಟ್ರೀಯ ಕಂಪೆನಿಗಳ ಸಾಂಸ್ಕೃತಿಕ ಆಕ್ರಮಣ ಎಷ್ಟು ದೂರ ಸಾಗಬಲ್ಲದೆಂಬುದರ ಇತ್ತೀಚಿನ ನಿದರ್ಶನ – ಬಂಗಾಳದಲ್ಲಿ ವಾರ್ಷಿಕ ದುರ್ಗಾಪೂಜೆಯ ಉತ್ಸವಾಚರಣೆಗಳನ್ನು ಕೋಕಾಕೋಲಾ ಕಂಪೆನಿ ತನ್ನ ಉತ್ಪನ್ನದ ಪ್ರಸಾರಕ್ಕಾಗಿ ಬಳಸಿಕೊಳ್ಳುತ್ತಿರುವುದು. ಪೂಜಾಸಮಿತಿಗಳಿಗೆ ಧಾರಾಳ ದೇಣಿಗೆ ಕೊಟ್ಟು ಕೋಕಾಕೋಲಾ ಕಂಪೆನಿ, ಪೂಜಾ ಮಂಟಪಗಳನ್ನು ಕೋಕಾಕೋಲಾ ಕೇಂದ್ರಗಳಾಗಿ ಪರಿವರ್ತಿಸಿದೆ. ಸಂಸ್ಕೃತಿಯು ಭಾರತದಲ್ಲಿ ಅತಿ ದೊಡ್ಡ ಪ್ರಮಾಣದಲ್ಲಿ ವಿತರಣೆಯಾಗುವ ವಿಷಯವೆಂದು ಮನಗಂಡು ಈ ಪ್ರಬಲ ಮಾಧ್ಯಮವನ್ನು ಬಹುರಾಷ್ಟ್ರೀಯ ಕಂಪೆನಿಗಳು ಸ್ವಲಾಭಕ್ಕೆ ಬಳಸಿಕೊಳ್ಳತೊಡಗಿವೆ. ಈಗಾಗಲೆ ಕ್ರಿಕೆಟ್ ಪಂದ್ಯಗಳ ಮೇಲೆ ಪ್ರಭುತ್ವ ಸ್ಥಾಪಿಸಿರುವ ಕೋಲಾ ಮತ್ತು ಪೆಪ್ಸಿ ಈಗ ಪೂಜಾಗೃಹಗಳಿಗೂ ಲಗ್ಗೆಯಿಟ್ಟಿವೆ. ದುರ್ಗಾಮಾತೆಯ ಪ್ರತಿಮೆಗಳ ನಡುವೆ ಸೌಂದರ್ಯಸ್ಪರ್ಧೆಗಳನ್ನು ಏರ್ಪಡಿಸುವಷ್ಟು ನೀಚ ಮಟ್ಟಕ್ಕೂ ಕೋಕಾಕೋಲಾ ಇಳಿದಿದೆ.

ದುರ್ಗಾಪೂಜೆ, ಗಣೇಶೋತ್ಸವ, ಬೈಶಾಖಿ, ದೀವಾಳಿ ಉತ್ಸವಗಳೆಲ್ಲ ಈಗ ಪೆಪ್ಸಿ ಕೋಲಾ ಆಶ್ರಯದ 'ಟ್ರೇಡ್ ಫೇರ್'ಗಳಾಗುತ್ತಿವೆ. ಶತ್ರುಮರ್ದಿನಿಯಾದ ದುರ್ಗಾಮಾತೆಯನ್ನೇ ಈಗ ಈ ಸಂಸ್ಕೃತಿಶತ್ರುಗಳ ಕೈಯಿಂದ ರಕ್ಷಿಸಬೇಕಾಗಿ ಬಂದಿದೆ.

ಇಂದ್ರಿಯಗ್ರಾಹ್ಯ ಜಗತ್ತಷ್ಟೇ ಸತ್ಯವಲ್ಲ, ಅದು ಅತ್ಯಂತ ಮುಖ್ಯವಾದದ್ದು ಕೂಡ ಅಲ್ಲ. ಯಾವುದು ಇಂದ್ರಿಯಗೋಚರವಲ್ಲವೋ ಆ ಸತ್ಯವೇ ಹೆಚ್ಚು ಮಹತ್ತ್ವದ್ದು. ಸಮ್ಯಗ್‌ಜ್ಞಾನಗಳಿಸಿದಲ್ಲಿ ಮಾನವ ವ್ಯಕ್ತಿತ್ವವೂ ವ್ಯಕ್ತಿ–ಜಗತ್ ಸಂಬಂಧಗಳೂ ಬೇರೆಯದೇ ಅರ್ಥ ಪಡೆದುಕೊಳ್ಳುತ್ತವೆ– ಮೊದಲಾದ ಪಾರಂಪರಿಕ ಭೂಮಿಕೆಯನ್ನು ಪಾಶ್ಚಾತ್ಯ "ಆಧುನಿಕತೆ" ಪಲ್ಲಟಗೊಳಿಸಿದೆ.

ಈಗ್ಗೆ ಹತ್ತು-ಹನ್ನೆರಡು ವರ್ಷಗಳ ಹಿಂದೆ ಮುಂಬಯಿ ಪತ್ರಿಕೆಯಲ್ಲಿ ವರದಿಯೊಂದು ಪ್ರಕಟವಾಗಿತ್ತು. ಆ ಬೃಹನ್ನಗರದ ಒಬ್ಬ ಚಿಕ್ಕ ಬಾಲಕಿ ಜೀವಂತ ಚಿಟ್ಟೆಯನ್ನೇ ಎಂದೂ ನೋಡಿರಲಿಲ್ಲವಂತೆ! ಇಂಥ ಅಸಂಖ್ಯ ವರದಿಗಳನ್ನು ನೋಡುವಾಗ, ತಂತ್ರಜ್ಞಾನ-ನಿರ್ದೇಶಿತ ಜೀವನದಲ್ಲಿ ಬದುಕಿನ ಗುಣಮಟ್ಟ ಹೆಚ್ಚುತ್ತಿದೆಯೆನ್ನಲು ಕಾರಣ ಕಾಣುವುದಿಲ್ಲ. ಮನುಷ್ಯರ ನಡುವೆಯೂ, ಮನುಷ್ಯ ಮತ್ತು ಪ್ರಕೃತಿಯ ನಡುವೆಯೂ ಸದಾ ಸಾಮರಸ್ಯ ಇರಬೇಕೆಂಬ ಪಾರಂಪರಿಕ ದೃಷ್ಟಿಯನ್ನು ನಾವು ಮರಳಿ ಗಳಿಸಿಕೊಂಡ ಹೊರತು ಉತ್ತಮ ಭವಿಷ್ಯ ಕಾಣದು. ಈ ಜೀವನಾದರ್ಶವನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ.

### ಭ್ರಮೆಯ ಹಿಡಿತ

ಇಂದಿನ ಕಾಲದಲ್ಲಿ ನಮ್ಮ ದೇಶದಲ್ಲಿ, ವಿಶೇಷವಾಗಿ ಮಧ್ಯಮ ವರ್ಗದವರ ಮಾನಸಿಕತೆಯಲ್ಲಿ ಒಂದು ಗೊಂದಲ ಏರ್ಪಟ್ಟಿದೆ. ಒಂದು ಕಡೆ ಅವರು ಸರಳತೆಗೆ, ಸಹಜತೆಗೆ ವಿದಾಯ ಹೇಳಿದ್ದಾರೆ. ಇನ್ನೊಂದು ಕಡೆ ಅವರು ತಮ್ಮ ಶಕ್ತಿಗೆ ಮೀರಿದ ಪರಕೀಯ ಜೀವನಶೈಲಿಯನ್ನು ಹೇಗಾದರೂ ಸಾಧಿಸಬೇಕು ಎಂದು ಪ್ರಯಾಸ ಪಡುತ್ತಿದ್ದಾರೆ. ಆ ಪ್ರಯಾಸ ಅವರ ಜೀವನವನ್ನು ಇನ್ನಷ್ಟು ಮತ್ತಷ್ಟು ಗೊಂದಲಮಯವಾಗಿಸುತ್ತದೆ ಎಂದು ಅವರಿಗೂ ತಿಳಿದಿದೆ. ಆದರೂ 'ಕಲೆಕ್ಟಿವ್ ಡ್ರೀಮ್' (ಸಮೂಹ ಸನ್ನಿ) ಎಂದು ಮನಃಶಾಸ್ತ್ರಜ್ಞರು ಕರೆದಿರುವ ಭ್ರಮೆಯ ಹಿಡಿತ ಜನರ ಮನಸ್ಸಿನ ಮೇಲೆ ಎಷ್ಟು ಪ್ರಬಲವಾಗಿದೆಯೆಂದರೆ ಅದನ್ನು ಅವರು ಬಿಡಲು ತಯಾರಿಲ್ಲ.

> "The only conquests, which are permanent and leave no regrets, are our conquests over ourselves."
>
> **ನಿತ್ಯವಾದ ಮತ್ತು ನಾವು ಪಶ್ಚಾತ್ತಾಪ ಪಡದೆ ಇರಬಹುದಾದ ಒಂದೇ ವಿಜಯವೆಂದರೆ, ನಮ್ಮ ಮೇಲೆ ನಾವು ನಿಯಂತ್ರಣ ಸಾಧಿಸುವ ಸ್ವ-ವಿಜಯ.**
>
> *- ನೆಪೋಲಿಯನ್*

ಆ ಭ್ರಮೆಯಿಂದ ಬಿಡಿಸಿಕೊಳ್ಳುವಂತೆ ನಾವು ಜನರನ್ನು ಎಚ್ಚರಿಸಬೇಕಾಗಿದೆ. ಹಲವೊಮ್ಮೆ ಸರಿಯಾದ ಪ್ರಶ್ನೆಗಳನ್ನು ಕೇಳುವುದೇ ಉತ್ಕರ್ಷದ ಮೊದಲ ಹಂತವಾದೀತು.

ಉದಾಹರಣೆಗೆ: ಹೊರಗಡೆಯಿಂದ ನಿರಂತರವಾಗಿ ಹರಿದು ಬರುವ ಪಾಶ್ಚಾತ್ಯ ಉತ್ಪನ್ನಗಳು, ತಂತ್ರಜ್ಞಾನಗಳು – ಇವುಗಳಲ್ಲಿ ನಾವು ಯಾವುದನ್ನು ಸ್ವೀಕರಿಸಬೇಕು? – ಎಂದು ಕೆಲವು ಸಲ ಪರಾಮರ್ಶೆ ನಡೆಸುತ್ತೇವೆ.

ಆದರೆ ಇದಕ್ಕೆ ಬದಲಾಗಿ,"ನಮಗೆ ಯಾವುದು, ಎಷ್ಟು ಬೇಕು?" ಎಂದು ಕೇಳಿಕೊಳ್ಳುವುದೇ ಹೆಚ್ಚು ಮುಖ್ಯ ಅಲ್ಲವೆ? ಇದರ ಬಗೆಗಿನ ಚಿಂತನೆಯಲ್ಲಿ ಸ್ಪಷ್ಟತೆ ಇದ್ದಲ್ಲಿ ಆಮೇಲಿನ ಸವಾಲುಗಳನ್ನು ಎದುರಿಸುವ ನಮ್ಮ ಕ್ಷಮತೆ ಹೆಚ್ಚುತ್ತದೆ. ಸ್ವಾಭಿಮಾನ, ಮತ್ತು ಮನಃಸ್ಥೈರ್ಯ- ಈ ಎರಡರದೇ ಈಗ ಕೊರತೆ ಇರುವುದು.

ಸ್ವಾತಂತ್ರ್ಯ ಅಥವಾ ಸ್ವರಾಜ್ಯ ಎಂಬ ಮಾತಿನಲ್ಲಿಯೆ ಅಡಗಿರುವ ಅರ್ಥ, ಎಲ್ಲ ರೀತಿಯ ವಸಾಹತುಶಾಹಿಯ ಅಂತ್ಯ ಎಂದು. ಅದನ್ನೇ ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ, ನಾವು ಏನು ಎಂಬುದರ ಬಗ್ಗೆ ನಮಗೆ ಸ್ಪಷ್ಟತೆ ಇರಬೇಕಾಗುತ್ತದೆ. ಆದರೆ ಇದನ್ನೇ ನಾವು ಅಲಕ್ಷಿಸಿದ್ದೇವೆ. ರಾಜಕೀಯ ಸ್ವಾತಂತ್ರ್ಯಗಳಿಕೆಗಿಂತ ಇದೇ ಮಹತ್ತ್ವದ ಸಂಗತಿ ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದರು.

ನಮಗೆ ಶತ್ರುಸ್ಥಾನದಲ್ಲಿರುವುದು ಯಾವುದೋ ಕೆಲವು ರಾಷ್ಟ್ರಗಳಾಗಲಿ, ವ್ಯಕ್ತಿಗಳಾಗಲಿ, ಜನವರ್ಗಗಳಾಗಲಿ ಮಾತ್ರವಲ್ಲ. ಮುನ್ನೂರು ವರ್ಷಗಳಿಂದ ಬೆಳೆದುಬಂದಿರುವ ಕೆಲವು ಜೀವನಸಿದ್ಧಾಂತಗಳು, ಅವುಗಳ ಹಿಂದಿರುವ ಮಾನಸಿಕತೆಯು ನಮ್ಮ ನಿಜವಾದ ಶತ್ರುಗಳು. ಅಂಥ ಮಾನಸಿಕತೆ ಸ್ವಲ್ಪಮಟ್ಟಿಗೆ ನಮ್ಮ ಅಂತರಂಗದಲ್ಲಿಯೂ ಮನೆಮಾಡಿಕೊಂಡಿದೆ. ಆದ್ದರಿಂದ ನಾವು ನಮ್ಮ ಮೇಲೂ ವಿಜಯ ಸಾಧಿಸಬೇಕಾಗಿದೆ. ಹೀಗೆ ವಿಜಯ ಗಳಿಸಬೇಕೆಂದರೆ ಇದರ ಚರ್ಚೆಯೂ ನಮ್ಮ ದೇಶೀಯ ಪರಿಭಾಷೆಯಲ್ಲಿಯೇ ನಡೆಯಬೇಕಾಗುತ್ತದೆ. ನಾವು ಎಲೀಟ್(Elite, ಪ್ರತಿಷ್ಠಿತ) ಪರಿಭಾಷೆಯನ್ನು ಬಿಟ್ಟುಬಿಡಬೇಕಾಗುತ್ತದೆ. ಪರಿಭಾಷೆಯೆಂದರೆ ಸಂವಾದವಿನ್ಯಾಸ. ಎಲ್ಲಿಯವರೆಗೆ ನಾವು ಪರಕೀಯ ಎಲೀಟ್ ಪರಿಭಾಷೆಗೆ ಅಂಟಿಕೊಂಡಿರುತ್ತೇವೋ ಅಲ್ಲಿಯವರೆಗೆ ಮುಕ್ತವಾಗಲಾರೆವು.

### ಸ್ವಾತಂತ್ರ್ಯದ ಹೃದಯ: ಸ್ವಾಭಿಮಾನ

ಸ್ವಾತಂತ್ರ್ಯವನ್ನೂ ಸಂಸ್ಕೃತಿಯನ್ನೂ ಕಳೆದುಕೊಳ್ಳುವುದು ಸುಲಭ; ಪಡೆಯುವುದೂ ಉಳಿಸಿಕೊಳ್ಳುವುದೂ ಕಷ್ಟ. ಒಮ್ಮೆ ಕಳೆದುಕೊಂಡೆವೆಂದರೆ ಅವನ್ನು ಮತ್ತೆ ಗಳಿಸಲು ದೀರ್ಘಕಾಲದ ಅಪಾರಶ್ರಮ ಹಿಡಿಯುತ್ತದೆ. ನಾವು ಬೆಳೆಸಿಕೊಂಡಿರುವ ಕೊಳ್ಳುಬಾಕ ಸಂಸ್ಕೃತಿ, ಅದರ ಒಡಗೂಡಿರುವ ನೈತಿಕ ಕುಸಿತ- ಇವು ಎಲ್ಲಕ್ಕಿಂತ ಮಾರಕ. ಇಂಥ ವಿಚಾರಶೂನ್ಯ ವರ್ತನೆಯ ಮೂಲಕ ನಾವು ನಮ್ಮ ಸಂಸ್ಕೃತಿಯನ್ನೂ, ದೇಶದ ಸ್ವಾಯತ್ತತೆಯನ್ನೂ ಒಟ್ಟಿಗೇ ಬಲಿಗೊಡುತ್ತಿದ್ದೇವೆ. ಯಾವುದೇ ಜನಾಂಗದಲ್ಲಿ ಸ್ವಾಭಿಮಾನವು ಪ್ರಜ್ವಲವಾಗಿ ಇದ್ದಲ್ಲಿ ಮಾತ್ರ ಅವರು ಸ್ವಾತಂತ್ರ್ಯವನ್ನು ಗಳಿಸಿ, ಉಳಿಸಿಕೊಳ್ಳಬಲ್ಲರು. ಇನ್ನೂರು ವರ್ಷಗಳ ಶ್ರಮದ ಫಲವಾದ ಸ್ವಾತಂತ್ರ್ಯದ ಮತ್ತು ಸಾವಿರಾರು ವರ್ಷಗಳ ಸಂಸ್ಕೃತಿಯ ನಾಶಕರೆಂದು ಈ ಪೀಳಿಗೆಯ ಬಗ್ಗೆ ಮುಂದಿನವರು ಉಲ್ಲೇಖ ಮಾಡಬಾರದು. ಅದಕ್ಕಾಗಿ ಇಂದೇ ಕಾರ್ಯೋನ್ಮುಖರಾಗುವುದರಲ್ಲಿಯೇ ಈ ದೇಶದ ಭವಿಷ್ಯ ನಿಂತಿದೆ.

■